**ಕರ್ನಾಟಕ ಸರ್ಕಾರ**

**ಶಾಲಾ ಶಿಕ್ಷಣ ಇಲಾಖೆ**

ಉಪನಿರ್ದೇಶಕರ ಕಛೇರಿ , ಶಾಲಾ ಶಿಕ್ಷಣ ಇಲಾಖೆ, BELAGAVI ಜಿಲ್ಲೆ

ದಿನಾಂಕ: 04/03/2024

**[ನಿಯಮ 3 ಉಪನಿಯಮ 5 (ಬಿ)]**

ಪ್ರಮಾಣ ಪತ್ರ ಸಂಖ್ಯೆ 240211,2023/24

ನೋಂದಣಿ ಆದೇಶ

ಈ ಕಚೇರಿ ಸುತ್ತೋಲೆ ಈ ಕಛೇರಿಯ ಸುತ್ತೋಲೆ ಸಂಖ್ಯೆ ಸಿ7(2) ಪ್ರಾ.ಶಿ.ಅ.ಹೊ.ಶಾ.ನೋಂ 01,2022/23 ದಿನಾಂಕ: ದಿ: 04/03/2024 ರಂತೆ MAHESH FOUNDATION ಇವರ ಗೌವರ್ನಿಂಗ್ ಕೌನ್ಸಿಲಿಂಗ್ ಈ ಶಿಕ್ಷಣ ಸಂಸ್ಥೆಯ UTKARSHA LEARNING CENTER ಶಾಲೆಯನ್ನು ಪ್ರಾರಂಭಿಸಲು ಸಲ್ಲಿಕೆಯಾದ ಪ್ರಸ್ತಾವನೆಯನ್ನು ಪರಿಶೀಲಿಸಿ ಕರ್ನಾಟಕ ಶಿಕ್ಷಣ ಕಾಯ್ದೆ 1983ರ [ಕರ್ನಾಟಕ ಆಕ್ಟ್ 1995] ಸೆಕ್ಷನ್ 31 ರಂತೆ ಈ ಕೆಳಕಂಡ Upgradation of Class 9 to 10 ಶಾಲೆ UTKARSHA LEARNING CENTER ತರಗತಿ ಪ್ರಾರಂಭಿಸಲು ಮಂಜೂರಾತಿ ನೀಡಿ ನೋಂದಾಯಿಸಲಾಗಿದೆ ಎಂದು ಪ್ರಮಾಣೀಕರಿಸಲಾಗಿದೆ.

1. ಅರ್ಜಿ ಸಂಖ್ಯೆ : 240211
2. ಕ್ರಮ ಸಂಖ್ಯೆ : G1/HO PRO SHA/VIVA/02/2023-24
3. ಶಾಲೆಯ ಹೆಸರು ಮತ್ತು ವಿಳಾಸ : UTKARSHA LEARNING CENTER 792/1, Siddeshwar Nagar, Kanabargi, Belagavi
4. ಅನುಮತಿ ನೀಡಿದ ತರಗತಿ : Upgradation of Class 9 to 10
5. ಶೈಕ್ಷಣಿಕ ವರ್ಷ : 2024/25
6. ಅನುಮತಿ ನೀಡಿದ ಮಾಧ್ಯಮ : Kannada
7. ಡೈಸ್ ಕೋಡ್ ಸಂಖ್ಯೆ : 29010305731
8. ಈ ಕಚೇರಿಯಲ್ಲಿನ ನೋಂದಣಿ ವಹಿಯಲ್ಲಿ ನೋಂದಾಯಿಸಿದ ಕ್ರಮ ಸಂಖ್ಯೆ /ಪುಟ ಸಂಖ್ಯೆ / ವಾಲ್ಯೂಂ ಸಂಖ್ಯೆ : 02 04 01

**ಷರತ್ತುಗಳು:**

1. ಈ ನೋಂದಣಿಯು ನಿಯಮ 3(5) (4) ಕ್ಕೆ ಒಳಪಟ್ಟಿರುತ್ತದೆ.
2. ಗೌರ್ನಿಂಗ್ ಕೌನ್ಸಿಲ್ ಇವರು ನಿಯಮ4(4) ರಲ್ಲಿ ತಿಳಿಸಿರುವ ಎಲ್ಲಾ ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸಬೇಕು
3. ಶಾಲೆಯನ್ನು ಮಂಜೂರು ಮಾಡಿರುವ ಮಾಧ್ಯಮದಲ್ಲಿ ಮತ್ತು ಅದೇ ಸ್ಥಳದಲ್ಲಿ ಮಾತ್ರ ತೆರೆಯತಕ್ಕದ್ದು ಹಾಗೂ ಯಾವುದೇ ಕಾರಣಕ್ಕೂ ಸ್ಥಳ ಬದಲಾವಣೆ ಮಾಡಲು ಅವಕಾಶವಿರುವುದಿಲ್ಲ. ಯಾವ ಆಡಳಿತ ಮಂಡಳಿಗೆ ಶಾಲೆ ನಡೆಸಲು ಅನುಮತಿ ನೀಡಲಾಗಿದೆಯೋ ಅದೇ ಆಡಳಿತ ಮಂಡಳಿಯು ಅದೇ ಸ್ಥಳದಲ್ಲಿಯೇ ಮತ್ತು ಅದೇ ಹೆಸರಿನಲ್ಲಿಯೇ ನಡೆಸತಕ್ಕದ್ದು.
4. ಈ ಶಿಕ್ಷಣ ಸಂಸ್ಥೆಯವರು ಶಿಕ್ಷಣ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಜಾರಿಯಲ್ಲಿರುವ ಹಾಗೂ ಆಗಿಂದಾಗೆ ಹೊರಡಿಸುವ ಎಲ್ಲಾ ಸರ್ಕಾರಿ ಆದೇಶಗಳು ಹಾಗೂ ನಿಯಮಗಳನ್ನು ಪಾಲಿಸತಕ್ಕದ್ದು. ಕರ್ನಾಟಕ ಶಿಕ್ಷಣ ಮಸೂದೆ 1983 ( ಕರ್ನಾಟಕ ಆಕ್ಟ್ ಸಂಖ್ಯೆ :1:96) ಇದರಡಿಯಲ್ಲಿ ಬರುವ ಕಾಯ್ದೆಗಳನ್ನು ಮತ್ತು ಅದರಡಿಯಲ್ಲಿ ರಚಿಸಲಾಗಿರುವ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
5. ಶಾಲಾ ನಿವೇಶನ , ವಿಸ್ತೀರ್ಣ, ಕಟ್ಟಡ ಪೀಠೋಪಕರಣಗಳು, ಸಿಬ್ಬಂದಿ ವರ್ಗ , ಆರ್ಥಿಕ ಅನುಕೂಲತೆಗಳು ಮುಂತಾದವುಗಳನ್ನು ಒದಗಿಸುವ ಷರತ್ತಿಗೆ ಒಳಪಟ್ಟಿರುತ್ತದೆ. ಸದರಿ ಶಿಕ್ಷಣ ಸಂಸ್ಥೆಯು ಯಾವುದೇ ಸಂಧರ್ಭದಲ್ಲಿಯೂ ಸರ್ಕಾರದ ಪೂರ್ವಾನುಮತಿ ಇಲ್ಲದೆ ಹೆಚ್ಚಿನ ವಿಭಾಗಗಳನ್ನು ತೆರೆಯುವಂತಿಲ್ಲ.
6. ಈ ಪ್ರೌಢಶಾಲಾ ನೋಂದಣಿಯಂತೆ ಸರ್ಕಾರಿ ಅಧಿಸೂಚನೆ ಸಂ:ಇಡಿ 175 ಪಿ.ಎಂ.ಸಿ 95 ದಿನಾಂಕ:07/09/1998 ಮತ್ತು ದಿನಾಂಕ:29/12/1998 ರ ಪ್ರಕಾರ ಶಾಶ್ವತ ಅನುದಾನರಹಿತವಾಗಿರುತ್ತದೆ. ಆಡಳಿತ ಮಂಡಳಿಯು ಸರ್ಕಾರದಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ರೂ 50/ ಛಾಪಾ ಕಾಗದಲ್ಲಿ ನೋಟರಿಯವರ ಮುಂದೆ ಪ್ರಮಾಣೀಕರಿಸಿ ಒಪ್ಪಿಗೆ ಪತ್ರವನ್ನು ನೀಡುವುದು.
7. ಕರ್ನಾಟಕ ಖಾಸಗಿ ಶಿಕ್ಷಣ ಸಂಸ್ಥೆಗಳು (ಖಾಸಗಿ ಅನುದಾನಿತ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಂಸ್ಥೆಗಳ ನೌಕರರ ನೇಮಕಾತಿ, ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮ1999 ರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು.
8. ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿದ ಪಠ್ಯ ಪುಸ್ತಕ , ಪರೀಕ್ಷಾ ಕ್ರಮಗಳನ್ನು ಮಾತ್ರ ತಪ್ಪದೇ ಅಳವಡಿಸಿಕೊಳ್ಳತಕ್ಕದ್ದು.
9. ತರಬೇತಿ ಹೊಂದಿದ ಹಾಗೂ ಇಲಾಖೆ ನಿಯಮಗಳ ಪ್ರಕಾರ ವಿದ್ಯಾರ್ಹತೆ ಹೊಂದಿದ ಶಿಕ್ಷಕರನ್ನು ಮಾತ್ರ ನೇಮಿಸಿಕೊಳ್ಳತಕ್ಕದ್ದು.

10. ಪ್ರತಿ ವರ್ಷವೂ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆಯನ್ನು ನಿಯಮಾನುಸಾರ ಮಾಡಿಸತಕ್ಕದ್ದು.

11. ಶಾಲೆಯನ್ನು ಪ್ರಾರಂಭಿಸಲು ಸಂಸ್ಥೆಯವರು ಭದ್ರತಾ ಠೇವಣಿಯನ್ನು ಜಿಲ್ಲಾ ಉಪನಿರ್ದೇಶಕರು ಹಾಗೂ ಆಡಳಿತ ಮಂಡಳಿಯ ಜಂಟಿ ಖಾತೆಯಲ್ಲಿ ಇರಿಸತಕ್ಕದ್ದು.

12. ಶಾಲೆ ತೆರೆದ ಬಗ್ಗೆ ಹಾಗೂ ವಿದ್ಯಾರ್ಥಿಗಳ ದಾಖಲಾತಿ ಮಾಹಿತಿಯನ್ನು ಶಾಲೆ ನೋಂದಣಿಯಾದ ಅಥವಾ ಶೈಕ್ಷಣಿಕ ವರ್ಷ ಪ್ರಾರಂಭವಾದ ಮೂರು ತಿಂಗಳ ಒಳಗಾಗಿ ಈ ಕಚೇರಿಗೆ ತಿಳಿಸಬೇಕು. ಒಂದು ವೇಳೆ ಶಾಲೆ ತೆರೆಯದಿದ್ದಲ್ಲಿ ಹಾಗೂ ಯಾವುದೇ ಷರತ್ತುಗಳನ್ನು ಪಾಲಿಸದಿದ್ದರೂ ಆದೇಶ ತಂತಾನೆ ರದ್ದಾಗುತ್ತದೆ.

13. ಶಾಲೆಯ ಕಟ್ಟಡ ಸುರಕ್ಷತೆ ಬಗ್ಗೆ ಬೆಂಕಿ, ಬಿರುಗಾಳಿ, ವಿದ್ಯು ತ್ ಅಪಘಾತ ಅವಘಡಗಳಿಂದ ಸುರಕ್ಷಿತವಾಗಿರುವ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ಶಾಲಾ ಆವರಣದಲ್ಲಿ 100 ಗಜಗಳ ಅಂತರದಲ್ಲಿ ತಂಬಾಕು ಉತ್ಪನ್ನಗಳ ಮಾರಾಟವನ್ನು ನಿಷೇಧಿಸಿದೆ ಎಂದು ಶಾಲಾ ಮುಂಬಾಗದಲ್ಲಿ ಪ್ರಕಟಣೆ ನೀಡುವುದು.

14. ಶಾಲಾ ಆಡಳಿತ ಮಂಡಳಿ ಯಾವುದೇ ತಪ್ಪು ಮಾಹಿತಿಗಳನ್ನು ನೀಡಿದ್ದಲ್ಲಿ ನೋಂದಣಿಯನ್ನು ರದ್ದುಪಡಿಸುವ ಅಧಿಕಾರಿ ಇಲಾಖೆ ಕಾಯ್ದಿರಿಸಿಕೊಂಡಿದೆ.

15. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 369 ಪಿ.ಜಿ.ಸಿ 2014 ದಿನಾಂಕ:11/11/2014 ರಂತೆ ಮತ್ತು ಈ ಕಚೇರಿ ಸುತ್ತೋಲೆ ದಿನಾಂಕ:14/11/2014 ರಂತೆ ಷರತ್ತುಗಳನ್ನು ಪಾಲಿಸುವುದು.

16. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 709 ಪಿ.ಜಿ.ಸಿ.2017 ದಿನಾಂಕ:07/03/2018 ರಂತೆ ಮತ್ತು ಈ ಕಚೇರಿ ಸುತ್ತೋಲೆ ದಿನಾಂಕ: 25/11/2019 ರಂತೆ ಷರತ್ತುಗಳನ್ನು ಪಾಲಿಸಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

17. ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಜಿಬಿಸಿ (1) 502/2004 ದಿನಾಂಕ: 08/07/2020 ರಂತೆ ಅಗ್ನಿ ಸುರಕ್ಷತೆಗೆ ಸಂಬಂಧಿಸಿದಂತೆ . ಮಹಾನಿರ್ದೇಶಕರು, ಕರ್ನಾಟಕ ರಾಜ್ಯ ಅಗ್ನಿ ಶಾಮಕ ಮತ್ತು ತುರ್ತು ಸೇವೆಗಳು, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ ಜಿಬಿಸಿ (1) 502/2004 ದಿನಾಂಕ: 08/07/2020 ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಕಾಲಕಾಲಕ್ಕೆ ನವೀಕರಿಸಿ ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸುವುದು.

18. ಕಟ್ಟಡ ಸುರಕ್ಷತೆಗೆ ಸಂಬಂಧಿಸಿದಂತೆ ಪ್ರಮಾಣ ಪತ್ರವನ್ನು ಕಾಲ ಕಾಲಕ್ಕೆ ಸಕ್ಷಮ ಪ್ರಾಧಿಕಾರದಿಂದ ನವೀಕರಿಸಿ ಸಂಬಂಧಿಸಿದ ಉಪನಿರ್ದೇಶಕರಿಗೆ ಸಲ್ಲಿಸುವುದು.

19. ಆನ್ ಲೈನ್ ನಲ್ಲಿ ಅಪ್ ಲೋಡ್ ಮಾಡಿದ ದಾಖಲೆಗಳು ನೈಜತೆಯಿಂದ ಕೂಡಿರದಿದ್ದಲ್ಲಿ ಈ ಆದೇಶವು ತಂತಾನೆ ರದ್ದಾಗುತ್ತದೆ.

20. ಶಾಲೆಯಲ್ಲಿ ಕಡ್ಡಾಯವಾಗಿ ಸೇವಾ ಭದ್ರತೆ ನಿಯಮಗಳನ್ನು ಪಾಲಿಸತಕ್ಕದ್ದು.

21. ಪ್ರಥಮ ಮಾನ್ಯತೆ ನೀಡುವ ಸಂದರ್ಭದಲ್ಲಿ ತಂತ್ರಾಂಶದಲ್ಲಿ ಅಪ್ಲೋಡ್ ಮಾಡಲಾದ ಮೂಲ ದಾಖಲೆಗಳಾದ ಪರಿವರ್ತನ ಭೂ ದಾಖಲೆ, ಕಟ್ಟಡ ಸುರಕ್ಷತಾ ಪ್ರಮಾಣ ಹಾಗೂ ಅಗ್ನಿ ಸುರಕ್ಷತಾ ಪ್ರಮಾಣ ಪತ್ರಗಳ ನೈಜತೆ ಖಚಿತಪಡಿಸಿಕೊಂಡ ನಂತರವೇ ಪ್ರಥಮ ಮಾನ್ಯತೆ ನೀಡತಕ್ಕದ್ದು.

22. ಪ್ರಥಮ ಮಾನ್ಯತೆಗಾಗಿ ಈ ಕಛೇರಿಗೆ 03 ತಿಂಗಳೊಳಗೆ ಪ್ರಸ್ತಾವನೆ ಸಲ್ಲಿಸುವುದು. ಉಪನಿರ್ದೇಶಕರು ಶಿಕ್ಷಣ ಕಾಯ್ದೆ ಮತ್ತು ಸರ್ಕಾರದ ಆದೇಶ ದಿನಾಂಕ: 30/09/2007 ರ ಅನುಬಂಧ 03 ರ ಚೆಕ್ ಲಿಸ್ಟ್ ಮಾಹಿತಿ ಪಡೆದು ಈ ಆಧಾರದ ಮೇಲೆ ಶಾಲೆ ಪ್ರಾರಂಭಿಸಿದ ಮೂರು ತಿಂಗಳೊಳಗೆ ಕಡ್ಡಾಯವಾಗಿ ಪ್ರಥಮ ಮಾನ್ಯತೆ ಪಡೆಯುವುದು ನಿಗದಿತ ಅವಧಿಯೊಳಗೆ ಮಾನ್ಯತೆ ಪಡೆಯದಿದ್ದಲ್ಲಿ ನೋಂದಣಿ ತಂತಾನೆ ರದ್ದಾಗುತ್ತದೆ.

23. ಶಾಲಾ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಆಡಳಿತ ಮಂಡಳಿಯು ಆನ್ ಲೈನ್ ನಲ್ಲಿ ಸಲ್ಲಿಸಿದ ಅರ್ಜಿಯಲ್ಲಿನ ಸಂಪೂರ್ಣ ದಾಖಲೆ/ ಮಾಹಿತಿಗಳನ್ನು ಇಲಾಖಾ ವೆಬ್ ಸೈಟ್ ನಲ್ಲಿ ಸಾರ್ವಜನಿಕವಾಗಿ ವೀಕ್ಷಿಸಲು ಅನುವುಮಾಡಿಕೊಡಲಾಗುವುದು.

**ಉಪನಿರ್ದೇಶಕರು (ಆಡಳಿತ) ಮತ್ತು**

**ನೋಂದಣಾಧಿಕಾರಿಗಳು**

**ಶಾಲಾ ಶಿಕ್ಷಣ ಇಲಾಖೆ,**

**BELAGAVI ಜಿಲ್ಲೆ.**

Digitally signed by MOHANKUMAR L HANCHATE
Date: 2024.03.04 11:43:39 +05:30

**ಇವರಿಗೆ,**

1. **ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ BELAGAVI CITY ತಾಲ್ಲೂಕು, BELAGAVI ಜಿಲ್ಲೆ**
2. **ಕಾರ್ಯದರ್ಶಿಗಳು MAHESH FOUNDATION , 792/1, SIDDESHWAR NAGAR, KANABARGI, BELAGAVI, KARNATAKA. 590016 BELAGAVI CITY**
3. **ಕಚೇರಿ ಪ್ರತಿ**